**ಪಾಠ–12** **ಮಾರ್ಚ್ 14–20**

# ಉತ್ತರ ಮತ್ತು ದಕ್ಷಿಣದಿಂದ ಸುಂದರವಾದ ನಾಡಿಗೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ದಾನಿಯೇಲ 11, ದಾನಿ 8:3–8, 20–22, ಯೆಶಾಯ 46:9,10, ದಾನಿ 8:9, 23, ಮತ್ತಾಯ 27:33–50.

**ಸ್ಮರಣವಾಕ್ಯ : ಜ್ಞಾನಿಗಳಲ್ಲಿಯೂ ಕೆಲವರು ಅಂತ್ಯಕಾಲದವರೆಗೆ ಬೀಳುತ್ತಿರುವರು, ಅದರಿಂದ ಜನರು ಶೋಧಿಸಲ್ಪಟ್ಟು ಶುದ್ಧಿ ಹೊಂದಿ ಶುಭ್ರರಾಗುವರು; ಅಂತ್ಯವು ಕ್ಲುಪ್ತಕಾಲದಲ್ಲೇ ಆಗುವುದು** (ದಾನಿಯೇಲ 11:35).

ಈ ಸವಾಲಿನ ಅಧ್ಯಾಯವನ್ನು ಕಲಿಯುವುದಕ್ಕೆ ಮೊದಲು ಕೆಲವು ಅಂಶಗಳನ್ನು ಆರಂಭದಲ್ಲಿಯೇ ಗೊತ್ತುಮಾಡಿಕೊಳ್ಳಬೇಕು.

ಮೊದಲನೆಯದು, ದಾನಿಯೇಲ 11ನೇ ಅಧ್ಯಾಯವು ಹಿಂದಿನ ಅಧ್ಯಾಯಗಳಲ್ಲಿರುವ ಪ್ರವಾದನೆಗಳಿಗೆ ಸಮಗ್ರವಾಗಿ ಸಮವಾಗಿ ನಿಲ್ಲುತ್ತದೆ. 2, 7, 8 ಮತ್ತು 9ನೇ ಅಧ್ಯಾಯಗಳ ಪ್ರವಾದನೆಯ ಸಂದೇಶಗಳು ಪ್ರವಾದಿಯ ಕಾಲದಿಂದ ಹಿಡಿದು ಅಂತ್ಯಕಾಲದವರೆಗೂ ವಿಸ್ತಾರವಾದವುಗಳಾಗಿವೆ. ಎರಡನೆಯದು, ದೇವಜನರನ್ನು ಆಗಾಗ ತುಳಿಯುವ ಲೋಕಶಕ್ತಿಗಳು ಅನುಕ್ರಮವಾಗಿ ಒಂದರನಂತರ ಮತ್ತೊಂದು ಅಸ್ತಿತ್ವಕ್ಕೆ ಬರುತ್ತವೆ. ಮೂರನೆಯದು, ಎಲ್ಲಾ ಪ್ರವಾದನೆಗಳ ಪರಾಕಾಷ್ಠತೆಯು ಸುಖಾಂತ್ಯಗೊಳ್ಳುತ್ತವೆ. ದಾನಿಯೇಲ 2ನೇ ಅಧ್ಯಾಯದಲ್ಲಿ ಬಂಡೆಯು ಪ್ರತಿಮೆಯನ್ನು ಒಡೆದು ನಾಶಪಡಿಸುತ್ತದೆ; 7ನೇ ಅಧ್ಯಾಯದಲ್ಲಿ ಮನುಷ್ಯಕುಮಾರನು ರಾಜ್ಯವನ್ನು ಪಡೆಯುತ್ತಾನೆ;

ದಾನಿಯೇಲ 8 ಮತ್ತು 9ನೇ ಅಧ್ಯಾಯಗಳು ದೇವದರ್ಶನ ಗುಡಾರದ ಶುದ್ಧೀಕರಣೆಯು ಮಹಾಯಾಜಕ ಕ್ರಿಸ್ತನಾದ ಆಗುವುದನ್ನು ಒಳಗೊಂಡಿವೆ.

ದಾನಿಯೇಲ 11ನೇ ಅಧ್ಯಾಯವು, ಮೂಲವಾಗಿ ಮೂರು ಅಂಶಗಳನ್ನು ಅನುಸರಿಸುತ್ತದೆ. ಮೊದಲನೆಯದು, ಪಾರಸಿಯ ರಾಜರುಗಳಲ್ಲಿ ಆರಂಭವಾಗಿ ಅವುಗಳಿಗಾಗುವ ಗತಿಯ ಬಗ್ಗೆ ಮತ್ತು ಕೊನೆಯ ಕಾಲದಲ್ಲಿ ಉತ್ತರದ ರಾಜನು ಪರಿಶುದ್ಧ ಪರ್ವತದ ಮೇಲೆ ಆಕ್ರಮಣ ಮಾಡುವ ಬಗ್ಗೆ ಚರ್ಚಿಸುತ್ತದೆ. ಎರಡನೆಯದು, ಉತ್ತರ ರಾಜನು ಮತ್ತು ದಕ್ಷಿಣ ರಾಜನು ಒಂದರನಂತರ ಇನ್ನೊಂದು ಯುದ್ಧಗಳನ್ನು ಮಾಡುವಾಗ ದೇವಜನರ ಮೇಲೆ ಆಗುವ ಪರಿಣಾಮಗಳನ್ನು ವರ್ಣಿಸುತ್ತದೆ. ಮೂರನೆಯದು, ಇದು ಉತ್ತರದ ರಾಜನು ಪರಿಶುದ್ಧ ಪರ್ವತದಿಂದ ಮರಣ ಹೊಂದಿ ಸುಖದಲ್ಲಿ ಮುಕ್ತಾಯವಾಗುತ್ತದೆ (ದಾನಿ 11:45). ಅಂತಹ ಸಕಾರಾತ್ಮಕ ಮುಕ್ತಾಯವು ಕೆಟ್ಟದರ ಕೊನೆಯನ್ನು ಮತ್ತು ದೇವರ ಶಾಶ್ವತ ರಾಜ್ಯದ ಸ್ಥಾಪನೆಯನ್ನು ಸೂಚಿಸುತ್ತದೆ.

ಈ ವಾರದ ಅಧ್ಯಯನವನ್ನು ಮಾರ್ಚ್ 21ರ ಸಬ್ಬತ್ತಿಗೆ ಸಿದ್ಧಮಾಡಿಕೊಳ್ಳಿರಿ.

**ಭಾನುವಾರ** **ಮಾರ್ಚ್ 15**

## ಪಾರಸಿಯ ಮತ್ತು ಗ್ರೀಕ್ ರಾಜ್ಯಗಳ ಪ್ರವಾದನೆ

ಓದಿರಿ : ದಾನಿಯೇಲ 11:1–4. ಇಲ್ಲಿ ಹಿಂದಿನ ಪ್ರವಾದನೆಗಳಲ್ಲಿ ನಾವು ನೋಡಿರುವ ಯಾವುದನ್ನು ನಮ್ಮ ನೆನಪಿಗೆ ತರುತ್ತದೆ?

ದೇವದೂತನಾದ ಗಬ್ರಿಯೇಲನು ದಾನಿಯೇಲನಿಗೆ ಇನ್ನೂ ಮೂವರು ಪಾರಸಿಯ ರಾಜರು ಏಳುತ್ತಾರೆಂದು ತಿಳಿಸುತ್ತಾನೆ. ಅವರ ನಂತರ 4ನೇ ರಾಜನು ಅವರೆಲ್ಲರಿಗಿಂತ ಶ್ರೀಮಂತನಾಗಿದ್ದು ಗ್ರೀಕರನ್ನು ಪ್ರಚೋದಿಸುತ್ತಾನೆ. ಕೋರೇಷನ ಬಳಿಕ ಅನುಕ್ರಮವಾಗಿ ಮೂವರು ರಾಜರುಗಳು ಪಾರಸಿಯ ರಾಜ್ಯದ ಮೇಲೆ ಅಧಿಕಾರವನ್ನು ಪ್ರಯೋಗಿಸುತ್ತಾರೆ. ಕಾಂಬೋಸಿಯ (ಕ್ರಿ.ಪೂ. 530–522). ಸ್ಮರ್ಡಿಸನು (ಕ್ರಿ.ಪೂ. 522) ಮತ್ತು ದಾರ್ಯವೆಷ (ಕ್ರಿ.ಪೂ. 522–486) 4ನೇ ರಾಜನು ಅರ್ತಶಸ್ತನು (ಎಸ್ತರಳು ಪುಸ್ತಕದಲ್ಲಿ ಅಹಶ್ವೇರೋಷ ಎಂಬುದಾಗಿದೆ). ಈತನು ಬಹಳ ಶ್ರೀಮಂತನಾಗಿದ್ದನು (ಎಸ್ತರಳು 1:1–7).

ಈತನು ಪ್ರವಾದನೆಯು ಹೇಳಿದಂತೆ ಗ್ರೀಕರ ಮೇಲೆ ದಂಡೆತ್ತಿ ಹೋದನು. ಆದರೆ ಗ್ರೀಕ್ ಸೈನ್ಯವು ಚಿಕ್ಕದಾಗಿದ್ದರೂ ವೀರಸೈನಿಕರು ಅವನನ್ನು ಹಿಮ್ಮೆಟ್ಟಿಸುತ್ತಾರೆ. ದಾನಿಯೇಲ 11:3ರಲ್ಲಿ ಏಳುವ ರಾಜನು ಬಲಾಢ್ಯನಾದ ಅಲೆಕ್ಸಾಂಡರನೆಂದು ಗುರುತುಹಿಡಿಯುವುದಕ್ಕೆ ಕಷ್ಟವಾಗುವುದಿಲ್ಲ. ಆತನು ಪುರಾತನ ಲೋಕದ ನಿರಂಕುಶ ಪ್ರಭುವಾಗಿದ್ದನು. ಆತನು ತನ್ನ 32ನೇ ವಯಸ್ಸಿನಲ್ಲಿಯೇ ತನ್ನ ರಾಜ್ಯಕ್ಕೆ ಉತ್ತರಾಧಿಕಾರಿ ಯಾರು ಇಲ್ಲದಿರುವಾಗಲೇ ಮರಣ ಹೊಂದಿದನು.

ಹಾಗಾಗಿ ಅಲೆಕ್ಸಾಂಡರನ ಸಾಮ್ರಾಜ್ಯವು ಅವನ ನಾಲ್ಕು ಜನ ಸೈನ್ಯಾಧಿಕಾರಿಗಳ ಪಾಲಾಯ್ತು. ಸೆಲಿಕ್ಯೂಸನು ಸಿರಿಯ ಮತ್ತು ಮೆಸಪೊಟೇಮಿಯ ತೆಗೆದುಕೊಂಡನು. ಟಾಲೆಮಿಯು ಐಗುಪ್ತವನ್ನು ತೆಗೆದುಕೊಂಡನು, ಲೂಸಿಮಾಕಸ್ಸನು ಥ್ರಾಸ್ ಮತ್ತು ಏಷ್ಯಾಪ್ರಾಂತ್ಯಗಳನ್ನು ತೆಗೆದುಕೊಂಡನು ಮತ್ತು ಕಸ್ಸಾಂಡರನು ಮೆಕೆದೋನ್ಯ ಹಾಗೂ ಗ್ರೀಸ್ ದೇಶವನ್ನು ತೆಗೆದುಕೊಂಡನು.

ದಾನಿಯೇಲ 11:2–4ನ್ನು 8:3–8 ಮತ್ತು 20–22 ವಚನಗಳ ಜೊತೆ ಹೋಲಿಸಿರಿ. ಈ ಎಲ್ಲಾ ವಚನಗಳು ಒಟ್ಟಾಗಿ ಅಲೆಕ್ಸಾಂಡರ್‌ನ ಅಧಿಕಾರವನ್ನು ಗುರುತಿಸಲು ಹೇಗೆ ಸಹಾಯ ಮಾಡುತ್ತವೆ?

ಈ ತರಹೇವಾರಿ (ವಿವಿಧ) ಹೆಸರುಗಳು, ದಿನಾಂಕಗಳು, ಸ್ಥಳಗಳು ಮತ್ತು ಐತಿಹಾಸಿಕ ಘಟನೆಗಳು ನಮಗೆ ಏನನ್ನು ಕಲಿಸುತ್ತವೆ? ಮೊದಲನೆಯದು, ದೇವದೂತರು ಭವಿಷ್ಯವನ್ನು ಕುರಿತು ಪ್ರವಾದನೆ ನುಡಿದಂತೆ ಎಲ್ಲವೂ ನೆರವೇರುತ್ತವೆಯೆಂದು ಕಲಿಯುತ್ತೇವೆ. ಯಾಕೆಂದರೆ ದೇವರ ಮಾತು ಎಂದಿಗೂ ಬಿದ್ದುಹೋಗುವುದಿಲ್ಲ. ಎರಡನೆಯದು, ದೇವರು ಚರಿತ್ರೆಯ ಒಡೆಯನಾಗಿದ್ದಾನೆ. ರಾಜಕೀಯಶಕ್ತಿಗಳು ನಾಯಕರುಗಳು ಮತ್ತು ರಾಜ್ಯಗಳು ಅಧಿಕಾರಕ್ಕೆ ನೂಕಲ್ಪಡುವುದು ಚಕ್ರವರ್ತಿಗಳ, ಸರ್ವಾಧಿಕಾರಿಗಳ ಮತ್ತು ರಾಜಕಾರಣಿಗಳ ಮಹತ್ವಾಕಾಂಕ್ಷೆಗಳಿಂದ ಎಂದು ಅಭಿಪ್ರಾಯ ಪಡುತ್ತೇವೆ. ಆದರೆ ದೇವರು ಸಮಸ್ತವನ್ನೂ ನಿಯಂತ್ರಿಸುವವನಾಗಿದ್ದು ತನ್ನ ಉದ್ದೇಶದ ಪ್ರಕಾರ ಚರಿತ್ರೆಯ ಚಕ್ರವನ್ನು ಉರುಳಿಸುತ್ತಾನೆಂದು ಸತ್ಯವೇದವು ತಿಳಿಯಪಡಿಸುತ್ತದೆ. ಕಡೆಯದಾಗಿ ಕೆಟ್ಟದ್ದು ನಾಶವಾಗಿ ದೇವರ ಶಾಶ್ವತ ರಾಜ್ಯವು ಸ್ಥಾಪನೆಯಾಗುತ್ತದೆ.

**ಸೋಮವಾರ** **ಮಾರ್ಚ್ 16**

## ಸಿರಿಯ ಮತ್ತು ಐಗುಪ್ತದೇಶಗಳ ಪ್ರವಾದನೆಗಳು

ಓದಿರಿ : ದಾನಿಯೇಲ 11:5–14. ಇಲ್ಲಿ ಯಾವುದು ಬಿಚ್ಚಿಕೊಳ್ಳುತ್ತಾ ಹೋಗುತ್ತದೆ?

ಮಹಾಶಯನಾದ ಅಲೆಕ್ಸಾಂಡರನು ಮರಣ ಹೊಂದಿದಾಗ ವಿಸ್ತಾರವಾದ ಗ್ರೀಕ್ ಸಾಮ್ರಾಜ್ಯವು ಆತನ ನಾಲ್ಕು ಸೇನಾಧಿಕಾರಿಗಳಿಗೆ ವಿಭಾಗಿಸಲ್ಪಟ್ಟಿತು. ಅವರಲ್ಲಿ ಇಬ್ಬರು ಸಿರಿಯ (ಉತ್ತರ) ದೇಶದ ಸೆಲಿಕ್ಯೂಸನು ಮತ್ತು ಐಗುಪ್ತ (ದಕ್ಷಿಣ) ದೇಶದ ಟಾಲೆಯಿ. ಒಂದು ಇನ್ನೊಂದರ ಮೇಲೆ ಅಧಿಕಾರ ಸ್ಥಾಪಿಸಲು ಯುದ್ಧ ಮಾಡುತ್ತಿರುತ್ತವೆ.

ಸತ್ಯವೇದವನ್ನು ಕಲಿಯುವ ಬಹುತೇಕ ವಿದ್ಯಾರ್ಥಿಗಳು ಉತ್ತರ ಮತ್ತು ದಕ್ಷಿಣ ದೇಶದ ರಾಜರುಗಳ ನಡುವೆ ನಡೆಯುವ ಯುದ್ಧಗಳು ದಾನಿಯೇಲ 11:5–14 ವಚನಗಳಲ್ಲಿ ಪ್ರವಾದಿಸಲಾಗಿರುವ ಯುದ್ಧಗಳೆಂದು ಅರ್ಥ ಮಾಡಿಕೊಂಡಿದ್ದಾರೆ. ಪ್ರವಾದನೆಯ ಪ್ರಕಾರ, ಈ ಎರಡು ರಾಜ್ಯಗಳನ್ನು ಒಂದುಗೂಡಿಸುವುದಕ್ಕೋಸ್ಕರ ಮದುವೆ ಸಂಬಂಧಗಳು ಪ್ರಯತ್ನವೂ ನಡೆಯಿತು (ದಾನಿ 11:6). ಚಾರಿತ್ರಿಕ ಮೂಲಗಳು ಒದಗಿಸುವ ಮಾಹಿತಿ ಪ್ರಕಾರ ಸೆಲಿಕ್ಯೂಸನ ಮೊಮ್ಮಗನಾದ ಅಂತಿಯೋಕಸ್ ಎಂಬುವನು (ಕ್ರಿ.ಪೂ. 261–246) ಐಗುಪ್ತ ದೇಶದ ರಾಜನಾದ 2ನೇ ಟಾಲೆಮಿಯಮಗಳು ಬರಿನೀಸ್‌ಳನ್ನು ಮದುವೆಯಾದನು. ಏನೇ ಆಗಲಿ ಆ ಒಪ್ಪಂದವು ಉಳಿದುಕೊಳ್ಳಲಿಲ್ಲ, ದೇವಜನರನ್ನು ಒಳಗೊಂಡಿರುವ ಜಗಳವು ಮತ್ತೆ ಪ್ರಾರಂಭವಾಗುತ್ತದೆ. ದಾನಿಯೇಲನು ದೃಶ್ಯದಿಂದ ಮರೆಯಾದ ನಂತರ ಅನೇಕ ಶತಮಾನಗಳ ಅವಧಿಯಲ್ಲಿ ನಡೆದ ಕೆಲವು ಮುಖ್ಯವಾದ ಘಟನೆಗಳು ದೇವಜನರ ಜೀವನವನ್ನು ಮುಟ್ಟುವುದರ ಬಗ್ಗೆ ದಾನಿಯೇಲ 11ನೇ ಅಧ್ಯಾಯವು ತಿಳಿಸುತ್ತದೆ. ದೇವರು ಯಾಕೆ ಮುಂದೆ ಲೋಕದಲ್ಲಿ ರಾಜ್ಯ ರಾಜ್ಯಗಳ ನಡುವೆ ನಡೆಯುವ ಯುದ್ಧಗಳ ಬಗ್ಗೆ ಬಹಳ ವಿವರವಾಗಿ ತಿಳಿಸುತ್ತಾನೆ ಎಂದು ಪ್ರಶ್ನೆ ಕೇಳಬಹುದು. ಕಾರಣ ಬಹಳ ಸರಳವಾಗಿದೆ. ಏನೆಂದರೆ ಈ ಯುದ್ಧಗಳು ದೇವಜನರುಗಳ ಮೇಲೆ ಪರಿಣಾಮ ಬೀರಲಿವೆ. ಆದುದರಿಂದ

ದೇವರು ತನ್ನ ಜನರು ಎದುರಿಸಬೇಕಾದ ಅನೇಕ ಸವಾಲುಗಳನ್ನು ಮುಂದಾಗಿ ತಿಳಿಸಿದ್ದಾನೆ.

ದೇವರೇ ಚರಿತ್ರೆಯ ಒಡೆಯನಾಗಿರುತ್ತಾನೆ. ನಾವು ಪ್ರವಾದನೆಯ ದಾಖಲೆಗಳನ್ನು ಚರಿತ್ರೆಯ ಘಟನೆಗಳೊಂದಿಗೆ ಹೋಲಿಸಿದಾಗ ಪ್ರವಾದನೆಯ ಮಾತುಗಳು ಮುಂತಿಳಿಸಿದಂತೆಯೇ ನೆರವೇರುತ್ತಾ ಹೋಗುವುದನ್ನು ಕಾಣುತ್ತೇವೆ. ದೇವರು ಸಾಮ್ರಾಜ್ಯಗಳ ಏರಿಳಿತವನ್ನು ಅವುಗಳು ಒಂದಕ್ಕೊಂದು ಯುದ್ಧ ಮಾಡುವುದನ್ನು ಮುಂತಿಳಿಸಿರುವಂತೆಯೇ ನಡೆಯುತ್ತದೆ. ಆದುದರಿಂದ ಆತನಿಗೆ ಭವಿಷ್ಯವು ತಿಳಿದಿರುತ್ತದೆ. ಆತನು ನಮ್ಮ ಭರವಸೆಗೂ ನಂಬಿಕೆಗೂ ಯೋಗ್ಯನಾಗಿದ್ದಾನೆ. ಈತನು ಮಹಾದೇವರು ಮಾನವ ಕಲ್ಪನೆಯಿಂದ ಕೆತ್ತಲ್ಪಟ್ಟ ವಿಗ್ರಹವಲ್ಲ. ಆತನು ಚಾರಿತ್ರಿಕ ಘಟನೆಗಳ ಓಟವನ್ನು ಮಾತ್ರ ನಿರ್ದೇಶುಸುವವನಲ್ಲ ಆದರೆ ನಾವು ಅವನಿಗೆ ಅವಕಾಶಕೊಟ್ಟರೆ ನಮ್ಮ ಜೀವನಗಳನ್ನು ನಿರ್ದೇಶಿಸುವವನಾಗಿದ್ದಾನೆ.

ಯೆಶಾಯ 46:9,10 ಓದಿರಿ. ಈ ಎರಡು ವಚನಗಳಲ್ಲಿ ಕ್ರೈಸ್ತತ್ವದ ಮೂಲತತ್ವವು ಎಷ್ಟು ಅಡಕವಾಗಿದೆಯಲ್ಲವೆ ಇವುಗಳಿಂದ ಎಂಥಾ ಮಹಾನಿರೀಕ್ಷೆಯನ್ನು ನಾವು ಹೊಂದಬಹುದು? ದೇವರು ದಯಾಮಯನೂ ಪ್ರೀತಿಯುಳ್ಳವನೂ ಆಗಿರದೆ ಪ್ರತೀಕಾರ ಮಾಡುವನೂ ಸಣ್ಣತನದವನೂ ಆಗಿರುತ್ತಿದ್ದರೆ ಎಂಥಾ ಭಯಾನಕವಾಗಿರುತ್ತಿತ್ತು ಎಂಬುದನ್ನು ಆಲೋಚಿಸಿರಿ?

**ಮಂಗಳವಾರ** **ಮಾರ್ಚ್ 17**

## ರೋಮ್ ಮತ್ತು ಒಡಂಬಡಿಕೆಯ ಪ್ರಭು (ನಿಬಂಧನಾಧಿಪತಿ)

ದಾನಿಯೇಲ 11:16–28 ವಚನಗಳನ್ನು ಓದಿರಿ. ವಚನವು ಕಷ್ಟವಾಗಿದ್ದಾಗ್ಯೂ, ದಾನಿಯೇಲ ಪುಸ್ತಕದಲ್ಲಿ ಬೇರೆ ಕಡೆ ಸಿಗುವ ಯಾವ ಚಿತ್ರಗಳು ನಿಮಗೆ ಸಿಕ್ಕುತ್ತವೆ? ಗ್ರೀಕ್ ರಾಜರುಗಳಿಂದ ಅಧಿಕಾರವು ಅಕ್ರೈಸ್ತಶಾಹಿ ರೋಮಿಗೆ ಹಸ್ತಾಂತರವಾಗುವುದನ್ನು ದಾನಿಯೇಲ 11:16ನೇ ವಚನದಲ್ಲಿ ನೋಡುತ್ತೇವೆ: ದಕ್ಷಿಣ ರಾಜನಿಗೆ ವಿರುದ್ಧವಾಗಿ ಬರುವವನು ಇಚ್ಛಾನುಸಾರ ನಡೆಯುವವನು; ಅವನಿಗೆ ಎದುರೇ ಇಲ್ಲ; ನಾಶನವನ್ನು ಕೈಯಲ್ಲಿಟ್ಟುಕೊಂಡು ಅಂದಚಂದದ

ದೇಶದಲ್ಲಿ ನಿಂತಿರುವನು. ಅಂದಚಂದದ ದೇಶವೆಂದರೆ ಯೆರೂಸಲೇಮು, ಇಲ್ಲಿ ಪುರಾತನ ಇಸ್ರಾಯೇಲ್ಯರು ನೆಲೆಯಾಗಿದ್ದರು, ಇದರ ಮೇಲೆ ಹೊಸ ಅಧಿಕಾರವನ್ನು ಅನ್ಯಧರ್ಮೀಯ ರೋಮು ಪಡೆದುಕೊಳ್ಳುವುದು. ಇದೇ ಘಟನೆಯು ಚಿಕ್ಕಕೊಂಬು ತನ್ನ ರಾಜ್ಯವನ್ನು ಉದ್ದಗಲಕ್ಕೂ ವಿಸ್ತರಿಸುವುದನ್ನು ಪ್ರತಿನಿಧಿಸುತ್ತದೆ (ದಾನಿ 8:9). ಈ ಸಂದರ್ಭದಲ್ಲಿ ಆಳ್ವಿಕೆಯ ಅಧಿಕಾರವನ್ನು ಅನ್ಯಧರ್ಮಶಾಹಿರೋಮು ಪಡೆದುಕೊಂಡಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಸತ್ಯವೇದದಲ್ಲಿರುವ ಕೆಲವು ವಚನಗಳು ಹೆಚ್ಚಿನ ಸುಳುಹುಗಳನ್ನು ಕೊಟ್ಟು ಗ್ರಹಿಕೆಯನ್ನು ಗಟ್ಟಿ ಮಾಡುತ್ತವೆ, ಉದಾಹರಣೆಗೆ ತೆರಿಗೆಗಳನ್ನು ವಿಧಿಸಿದವನು ಕೈಸರ ಅಗಸ್ಟಸ್. ಇವನ ಆಳ್ವಿಕೆಯ ಕಾಲದಲ್ಲಿ ಜನಗಣತಿ ನಡೆದಾಗ ಯೋಸೇಫನು ತನ್ನ ಹೆಂಡತಿಯನ್ನು ಬೇತ್ಲೆಹೇಮಿಗೆ ಕರೆದುಕೊಂಡು ಹೋಗುವಾಗ ಆಕೆ ಯೇಸುವನ್ನು ಹೆತ್ತಳು (ದಾನಿ 11:20) ಮತ್ತು ಪ್ರವಾದನೆ ಹೇಳುವ ಪ್ರಕಾರ ಕೈಸರನ ಉತ್ತರಾಧಿಕಾರಿಯಾಗಿ ಅವನ ಸಾಕುಮಗನಾದ ತಿಬೇರಿಯನು ಬಂದನು (ದಾನಿ 11:21). ಈತನು ದುಷ್ಟನು ವಿಪರೀತನು ಆದ ವ್ಯಕ್ತಿಯಾಗಿದ್ದನು ಎಂಬುದನ್ನು ಚರಿತ್ರೆಯು ತೋರಿಸುತ್ತದೆ.

ಬಹಳ ಮುಖ್ಯವಾದುದೇನೆಂದರೆ ಸತ್ಯವೇದದ ವಚನದ ಪ್ರಕಾರ ತಿಬೇರಿಯನ ಆಳ್ವಿಕೆಯ ಕಾಲದಲ್ಲಿ 'ದೇವರ ನಿಬಂಧನಾಧಿಪತಿ'ಯು ಮುರಿಯಲ್ಪಟ್ಟನು (ದಾನಿ 11:22). ಇದು ಸ್ಪಷ್ಟವಾಗಿ 'ಅಭಿಷಿಕ್ತನಾದ ಪ್ರಭುವು' ಎಂದು ಕರೆಯಲ್ಪಟ್ಟಿರುವ ಯೇಸುಕ್ರಿಸ್ತನ ಶಿಲುಬೆಯ ಮರಣವನ್ನು ಸೂಚಿಸುತ್ತದೆ (ದಾನಿ 9:25; ಮತ್ತಾಯ 27:33–50ನ್ನು ಸಹಾ ನೋಡಿರಿ). ಯೇಸುವನ್ನು ನಿಬಂಧನಾಧಿಪತಿ (ಒಡಂಬಡಿಕೆಯ ಪ್ರಭು) ಎಂದು ಕರೆದಿರುವುದು ಚಾರಿತ್ರಿಕ ಘಟನೆಗಳ ಹರಿವನ್ನು ತೋರಿಸಲು ಬಲಿಯುತವಾದ ಗುರುತಾಗಿದೆ. ಮತ್ತು ಇದು ಓದುಗರಿಗೆ ದೇವರಿಗಿರುವ ಭವಿಷ್ಯತ್ತಿನ ಜ್ಞಾನದ ಬಗ್ಗೆ ಪ್ರಬಲವಾದ ಪುರಾವೆಯನ್ನು ನೀಡುತ್ತದೆ. ದೇವರು ಪ್ರವಾದನೆಯಲ್ಲಿ ನುಡಿದಿರುವುದೆಲ್ಲಾ ಅಕ್ಷರಶಃ ನೆರವೇರಿರುವುದರಿಂದ ಭವಿಷ್ಯದಲ್ಲಿ ಏನಾಗುತ್ತದೆಯೆಂದು ಹೇಳುತ್ತಾನೋ ಅದರ ಮೇಲೆ ನಾವು ಖಂಡಿತವಾಗಿಯೂ ಭರವಸೆ ಇಟ್ಟುಕೊಳ್ಳಬಹುದು.

ಎಲ್ಲಾ ರಾಜಕೀಯ ಮತ್ತು ಚಾರಿತ್ರಿಕ ಘಟನೆಗಳ ನಡುವೆಯೂ ನಜರೇತಿನ ಯೇಸುವು, "ಒಡಂಬಡಿಕೆಯ ಪ್ರಭುವು" ವಚನಗಳಲ್ಲಿ ಪ್ರಕಟಿಸಲ್ಪಟ್ಟಿದ್ದಾನೆ. ಎಲ್ಲಾ ಅಲ್ಲೋಲಕಲ್ಲೋಲಗಳ, ರಾಜಕೀಯ ಪಿತೂರಿಗಳ ನಡುವೆಯ ಕ್ರಿಸ್ತನು 'ದೇವರ ವಾಕ್ಯದ ಕೇಂದ್ರ'ವಾಗಿ ಉಳಿಯುತ್ತಾನೆ ಎಂಬುದನ್ನು ನಮಗೆ ತೋರಿಸಲು ಇದು ಹೇಗೆ ಸಹಾಯ ನೀಡುತ್ತದೆ?

**ಬುಧವಾರ** **ಮಾರ್ಚ್ 18**

## ಮುಂದಿನ ಅಧಿಕಾರ

ದಾನಿಯೇಲ 11:29–39ನ್ನು ಓದಿರಿ. ಅನ್ಯಧರ್ಮಶಾಹಿರೋಮ್‌ನಿಂದ ಯಾವ ಅಧಿಕಾರವು ಮೇಲೇರಿ ಬರುತ್ತದೆ?

ದಾನಿಯೇಲ 11:29–39 ಹೊಸ ಅಧಿಕಾರ ವ್ಯವಸ್ಥೆಯನ್ನು ತಿಳಿಸುತ್ತದೆ. ಇದು ಅನ್ಯಧರ್ಮಶಾಹಿ ರೋಮು ಅಧಿಕಾರದಲ್ಲಿ ಮುಂದುವರೆಯುತ್ತಿರುವಾಗಲೇ ಈ ವ್ಯವಸ್ಥೆಯು ಎದ್ದು ನಿಲ್ಲುತ್ತದೆ ಮತ್ತು ಅದರ ಹಿಂಸೆ ಇದ್ದ ಅಧಿಕಾರದ ಕೆಲವು ಗುಣಲಕ್ಷಣಗಳನ್ನು ಹುಟ್ಟನಿಂದಲೇ ಪಡೆದುಕೊಂಡಿರುತ್ತದೆ. ಅದೇ ಸಂದರ್ಭದಲ್ಲಿ ಕೆಲವು ಅಂಶಗಳಲ್ಲಿ ವಿಭಿನ್ನವಾಗಿರುವಂತೆಯೂ ಕಾಣುತ್ತದೆ. ಸತ್ಯವೇದದ ವಚನಗಳು ಅದು ಮೊದಲಿದ್ದವನಂತೆಯೂ ಇರುವುದಿಲ್ಲ. ನಂತರ ಬರುವವನಂತೆಯೂ ಇರುವುದಿಲ್ಲ ಎಂದು ಹೇಳುತ್ತದೆ (ದಾನಿ 11:29). ಇದನ್ನು ಇನ್ನೂ ಹೆಚ್ಚಾಗಿ ಪರಿಶೀಲಿಸಿದಾಗ ಇದು ಧಾರ್ಮಿಕ ಅಧಿಕಾರದಂತೆ ಕಾರ್ಯವೆಸಗುವುದನ್ನು ಕಾಣುತ್ತೇವೆ. ಇದು ಮುಖ್ಯವಾಗಿ ದೇವರ ಮತ್ತು ಆತನ ಜನರ ಮೇಲೆ ಆಕ್ರಮಣ ಮಾಡುವ ಗುರಿಯನ್ನು ಇಟ್ಟುಕೊಂಡಿರುತ್ತದೆ. ಉತ್ತರದ ರಾಜನು ಎಸಗಿದ ಕೆಲವು ದುಷ್ಕೃತ್ಯಗಳು ಯಾವವು ಎಂಬುದನ್ನು ನಾವು ನೋಡೋಣ. ಮೊದಲನೆಯದು, ಆತನು ಮತ್ಸರದಿಂದ "ಪರಿಶುದ್ಧ ನಿಬಂಧನೆಗೆ" ವಿರೋಧವಾಗಿ ನಿಂತನು (ದಾನಿ 11:30). ಇದು ದೇವರ ರಕ್ಷಣೆಯ ನಿಬಂಧನೆಯಾಗಿದ್ದು ಇದನ್ನು ರಾಜನು ವಿರೋಧಿಸಿದನು. ಎರಡನೆಯದು, ಈ ರಾಜನು ನಿತ್ಯಹೋಮವನ್ನು ತೆಗೆದುಹಾಕಿ ದೇವದರ್ಶನ ಗುಡಾರವನ್ನು" ಹೊಲೆ ಮಾಡುವ ಸೈನ್ಯಗಳನ್ನು ಹುಟ್ಟುಹಾಕಿದನು (ದಾನಿ 11:31). ದಾನಿಯೇಲ

8ನೆ ಅಧ್ಯಾಯದಲ್ಲಿ ಬರುವ ಚಿಕ್ಕಕೊಂಬು ನಿತ್ಯಹೋಮವು ದೇವರಿಗೆ ಸಲ್ಲದಂತೆ ಮಾಡಿ ಆತನ ಪವಿತ್ರಸ್ಥಾನವನ್ನು ಕೆಡವಿ.... ವೃದ್ಧಿಗೆ ಬಂತು (ದಾನಿ 8:11). ಇದನ್ನು ಕ್ರಿಸ್ತನು ಪರಲೋಕದ ಗುಡಾರದಲ್ಲಿ ಮಹಾಯಾಜಕನ ಸೇವೆಯ ಮೇಲೆ ಮಾಡಿದ ಆತ್ಮೀಕ ಆಕ್ರಮಣವೆಂದು ಅರ್ಥಮಾಡಿಕೊಳ್ಳಬಹುದು. ಮೂರನೆಯದು, ದೇವದರ್ಶನ ಗುಡಾರದ ಮೇಲೆ ಆಕ್ರಮಣ ಮಾಡಿದ ಪರಿಣಾಮವಾಗಿ ಈ ಸೈನ್ಯವು ಹಾಳುಮಾಡುವ ಅಸಹ್ಯ ವಸ್ತುವನ್ನು ದೇವರ ಆಲಯದಲ್ಲಿ ತಂದಿರಿಸಿತು. "ಹಾಳುಮಾಡುವ ಉಲ್ಲಂಘನೆ"ಯು ಇದಕ್ಕೆ ಸಮವಾದ ಉಕ್ತಿಯಾಗಿದ್ದು, ಸಣ್ಣಕೊಂಬಿನ ಧರ್ಮಭ್ರಷ್ಟ ಕಾರ್ಯಗಳನ್ನು ಮತ್ತು ಪ್ರತಿಭಟನೆಯ ಗುಣವನ್ನು ಸೂಚಿಸುತ್ತದೆ (ದಾನಿ 8:13).

ನಾಲ್ಕನೆಯದು, ಈ ಅಧಿಕಾರವು ದೇವಜನರನ್ನು ಹಿಂಸಿಸುತ್ತದೆ, "ಜ್ಞಾನಿಗಳಾದ ಕೆಲವರು ಬೀಳುವರು; ಅದರಿಂದ ಜನರು ಶೋಧಿಸಲ್ಪಟ್ಟು ಶುದ್ಧಿ ಹೊಂದಿ ಶುಭ್ರರಾಗುವರು; ಅಂತ್ಯವು ಕ್ಲುಪ್ತಕಾಲದಲ್ಲಿಯೇ ಆಗುವುದು" (ದಾನಿ 11:35). ಇದು ಚಿಕ್ಕಕೊಂಬು ನಕ್ಷತ್ರಗಣಗಳ ಮೇಲೆ ಕೈಮಾಡುವಷ್ಟು ಹೆಚ್ಚಿ ಆಗಣದ ಕೆಲವು ನಕ್ಷತ್ರಗಳನ್ನು ನೆಲಕ್ಕೆ ಕೆಡವಿ ತುಳಿದುಬಿಟ್ಟಿತು ಎಂದು ಹೇಳುವ ದಾನಿ 8:10 ಮತ್ತು 7:25ನ್ನು ನೆನಪಿಗೆ ತರುತ್ತದೆ.

ಐದನೆಯದು, ರಾಜನು ಮನಸ್ಸು ಬಂದ ಹಾಗೆ ನಡೆದು ತಾನು ಎಲ್ಲಾ ದೇವರುಗಳಿಗಿಂತ ದೊಡ್ಡವನೆಂದು ತನ್ನನ್ನು ಹೆಚ್ಚಿಸಿಕೊಂಡು ಉಬ್ಬಿ ದೇವಾದಿ ದೇವನನ್ನು ಮಿತಿಮೀರಿ ದೂಷಿಸಿದನು (ದಾನಿ 11:36). ಹೀಗೆಯೇ ಚಿಕ್ಕಕೊಂಬು ಸಹಾ ಬಡಾಯಿಕೊಚ್ಚಿಕೊಳ್ಳುವವನನ್ನು (ದಾನಿ 7:8), ಪರಾತ್ಪರನ ವಿರುದ್ಧವಾಗಿ ಕೊಚ್ಚಿಕೊಳ್ಳುವುದನ್ನು (ದಾನಿ 7:25) ನೋಡುವಾಗ ಆಶ್ಚರ್ಯಪಡಬೇಕಾಗಿಲ್ಲ.

ಇತರೆ ಸಾಮ್ಯತೆಗಳನ್ನು ಸಹಾ ಹೆಸರಿಸಬಹುದು. ಆದರೆ ದಾನಿಯೇಲ 7 ಮತ್ತು 8ನೇ ಅಧ್ಯಾಯಗಳಲ್ಲಿ ಓದುವುದನ್ನು ಪರಿಗಣಿಸಿದಾಗ ಈ ಅಧಿಕಾರ ಹೊಂದಿರುವವರು ಯಾರು, ಸಾಮಾಜಿಕ ಒತ್ತಡಗಳನ್ನು ಹೊರತುಪಡಿಸಿ ಇದನ್ನು ಗುರುತು ಹಚ್ಚುವುದರಲ್ಲಿ ನಾವು ದೃಢವಾಗಿ ನಿಲ್ಲುವುದು ಬಹಳ ಮುಖ್ಯವಾಗಿದೆ ಯಾಕೆ?

**ಗುರುವಾರ** **ಮಾರ್ಚ್ 19**

## ಅಂತಿಮ ಘಟನೆಗಳು

ದಾನಿಯೇಲ 11:40–45ನ್ನು ಓದಿರಿ. ಇಲ್ಲಿ ಎನಾಗುತ್ತಿದೆ?

ಈ ಕೆಳಗಿನ ಪದವೃಂದಗಳು ನಮಗೆ ವಚನವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ.

**ಅಂತ್ಯಕಾಲ :** 'ಅಂತ್ಯಕಾಲ'ವೆಂಬ ಉಕ್ತಿ (ನುಡಿ) ದಾನಿಯೇಲ ಪುಸ್ತಕದಲ್ಲಿ ಮಾತ್ರ ಕಾಣಸಿಗುತ್ತದೆ (ದಾನಿ 8:17; 11:35, 40 ಮತ್ತು 12:4,9). ದಾನಿಯೇಲನ ಪ್ರವಾದನೆಗಳನ್ನು ಪರಿಶೀಲಿಸಿದಾಗ ಅಂತ್ಯಕಾಲವು ಕ್ರಿ.ಶ. 1798ರಲ್ಲಿ ಪೋಪುಶಾಹಿ ಅಂತ್ಯಗೊಂಡಂದಿನಿಂದ ಹಿಡಿದು ಸತ್ತವರು ಪುನರುತ್ಥಾನ ಹೊಂದುವವರೆಗೂ ವಿಸ್ತರಿಸುತ್ತದೆ (ದಾನಿ 12:2).

**ಉತ್ತರ ರಾಜನು :** ಈ ಹೆಸರು ಭೌಗೋಳಿಕವಾಗಿ ಸೆಲೂಸಿಡನ ರಾಜಸಂತತಿ ಎಂದು ಗೊತ್ತುಮಾಡಲ್ಪಟ್ಟಿದೆ, ಆದರೆ ನಂತರ ಇದು ಅನ್ಯಧರ್ಮಶಾಹಿಯ ರೋಮನ್ನು ಕಡೆಯದಾಗಿ ಪೋಪುಶಾಹಿ ರೋಮನ್ನು ಸೂಚನೆ ಮಾಡುತ್ತದೆ. ಹಾಗಾಗಿ ಇದು ಭೌಗೋಳಿಕ ಸ್ಥಳವನ್ನು ಕುರಿತು ಹೇಳುವುದಿಲ್ಲ. ಆದರೆ ದೇವಜನರ ಆಧ್ಯಾತ್ಮಿಕ ವೈರಿಯನ್ನು ಕುರಿತು ಹೇಳುತ್ತದೆ. ಇದರ ಜೊತೆಗೆ ಉತ್ತರ ರಾಜನು ಎಂಬುದು ಸತ್ಯದೇವರ ವಿರೋಧಿಯನ್ನು ಪ್ರತಿನಿಧಿಸುತ್ತದೆ ಎಂದೂ ಗಮನವಿಡಬೇಕು. ಸತ್ಯವೇದದಲ್ಲಿ ಈತನು ಸಾಂಕೇತಿಕವಾಗಿ ಉತ್ತರದಿಕ್ಕಿಗೆ ಸಂಬಂಧಪಡುತ್ತಾನೆ (ಯೆಶಾಯ 14:13).

**ದಕ್ಷಿಣರಾಜ :** ಈ ಹೆಸರು ಮೊದಲಿಗೆ ಐಗುಪ್ತದೇಶದಲ್ಲಿನ 'ಟಾಲೆಮಿ'ಯ ರಾಜನ ಸಂತತಿಯನ್ನು ಗೊತ್ತುಮಾಡುತ್ತದೆ, ಇದು ಪರಿಶುದ್ಧ ದೇಶದ ದಕ್ಷಿಣಕ್ಕಿದೆ. ಆದರೆ ಪ್ರವಾದನೆಯು ಬಿಚ್ಚುಕೊಳ್ಳುತ್ತಿದ್ದಂತೆಯೇ ಇದು ತಾತ್ವಿಕ ಆಯಾಮವನ್ನು ಪಡೆದುಕೊಳ್ಳುತ್ತದೆ. ಇದು ನಿರೀಶ್ವರವಾದಕ್ಕೆ (ದೇವರಿಲ್ಲವೆಂದು ನಂಬುವ ತತ್ವ) ಸಂಬಂಧಿಸಿದೆಯೆಂದು ವಿದ್ವಾಂಸರು ಹೇಳುತ್ತಾರೆ. ಪ್ರಕಟನೆ 11:8ರಲ್ಲಿರುವ 'ಐಗುಪ್ತ'ದ ಉಲ್ಲೇಖವನ್ನು ಎಲೆನ್ ಜಿ ವೈಟಮ್ಮನವರು ವ್ಯಾಖ್ಯಾನಿಸುತ್ತಾ 'ಇದು ನಿರೀಶ್ವರವಾದ (ಪಾಷಂಡವಾದ)' ಎಂದು ಹೇಳುತ್ತಾರೆ–

ಮಹಾಹೋರಾಟ ಪುಟ 269.

**ಅಂದಚಂದದ ಪರಿಶುದ್ಧ ಪರ್ವತ :** ಹಳೆಯ ಒಡಂಬಡಿಕೆಯ ಕಾಲದಲ್ಲಿ ಈ ಉಕ್ತಿಯು ಚೀಯೋನ್ ಕುರಿತು ಹೇಳುತ್ತದೆ. ಇಸ್ರಾಯೇಲ್ಯರ ರಾಜಧಾನಿ ಮತ್ತು ಹೃದಯವೂ ಆಗಿದ್ದು, ಭೌಗೋಳಿಕವಾಗಿ ವಾಗ್ದಾನ ದೇಶದೊಳಗಿನ ಜನಾಂಗಕ್ಕೆ ಅನ್ವಯಿಸಬಾರದು. ಆದುದರಿಂದ ಪರಿಶುದ್ಧಪರ್ವತವು ಸಾಂಕೇತಿಕವಾಗಿ ಲೋಕದಾದ್ಯಂತ ಹರಡಿಕೊಂಡಿರುವ ದೇವಜನರನ್ನು ಸೂಚಿಸುತ್ತದೆ.

ಆದುದರಿಂದ, ಬಹುಶಃ ನಾವು ಘಟನೆಗಳನ್ನು ಹೀಗೆ ಅರ್ಥೈಸಬಹುದು:

1. ದಕ್ಷಿಣರಾಜನು ಉತ್ತರರಾಜನ ಮೇಲೆ ಆಕ್ರಮಣ ಮಾಡುತ್ತಾನೆ: ಫ್ರೆಂಚ್ ಕ್ರಾಂತಿಯು ಧರ್ಮವನ್ನು ನಾಶಪಡಿಸಲು ಮಾಡಿದ ಪ್ರಯತ್ನವಾಗಿ ಪೋಪ್‌ನನ್ನು ಸೋಲಿಸಿತು. ಆದರೆ ಕಡೆಗೆ ವಿಫಲವಾಯ್ತು.
2. ಉತ್ತರರಾಜನು ದಕ್ಷಿಣ ರಾಜನ ಮೇಲೆ ಆಕ್ರಮಣ ಮಾಡಿ ಅವನನ್ನು ಸೋಲಿಸುತ್ತಾನೆ: ಪೋಪು ಮತ್ತು ಅವನ ಮೈತ್ರಿಕೂಟ ಧಾರ್ಮಿಕ ಬಲಗಳನ್ನು ಉಪಯೋಗಿಸಿ ನಿರೀಶ್ವರವಾದದ ಬಲಗಳನ್ನು ಸೋಲಿಸಿ ಸೋತುಹೋದ ವೈರಿಯ ಜೊತೆ ಮೈತ್ರಿ ಮಾಡಿಕೊಂಡನು.
3. ಎದೋಮ್ಯರು, ಮೊದಾಬ್ಯರು ಮತ್ತು ಅಮೋನಿನ ಹೆಚ್ಚಿನ ಭಾಗದವರು ಇವರುಗಳು ಅವನ ಕೈಯಿಂದ ತಪ್ಪಿಸಿಕೊಳ್ಳುವರು; ದೇವರ ಸತ್ಯವಾದ ಜನರ ಜೊತೆ ಲೆಕ್ಕಿಸಲ್ಪಡದ ಕೆಲವರು ಕೊನೆಯ ಗಳಿಗೆಯಲ್ಲಿ ಹಿಂಡಿಗೆ ಸೇರಿಸಲ್ಪಡುವರು.
4. ಉತ್ತರರಾಜನು ಪರಿಶುದ್ಧಪರ್ವತವನ್ನು ಆಕ್ರಮಿಸಿಕೊಳ್ಳಲು ಸಿದ್ಧಮಾಡಿ ಕೊಳ್ಳುತ್ತಾನೆ. ಆದರೆ ಅವನು ಕೊನೆಗಾಣುವನು: ದುಷ್ಟಶಕ್ತಿಗಳು ನಾಶವಾಗುವವು. ದೇವರ ರಾಜ್ಯವು ಸ್ಥಾಪಿಸಲ್ಪಡುವುದು. ಅಂತ್ಯದಲ್ಲಿ ದೇವರು ಮತ್ತು ಆತನ ಜನರು ಜಯಶಾಲಿಗಳಾಗುವರು ಎಂದು

ತಿಳಿಯುವುದರಿಂದ ನಾವು ಆದರಣೆಯನ್ನು ಹೊಂದುವುದು ಹೇಗೆ?

**ಶುಕ್ರವಾರ** **ಮಾರ್ಚ್ 20**

**ಹೆಚ್ಚಿನ ಚಿಂತನೆಗೆ :** ದಾನಿಯೇಲ 11:29–39 ಕನಿಷ್ಠ ಪರಾಮರ್ಶಿಸುವಾಗ ಮಾರ್ಟಿನ್ ಲೂತರನು ದಾನಿಯೇಲ 11:31ರಲ್ಲಿರುವ ಹಾಳು ಮಾಡುವ ಅಸಹ್ಯ ವಸ್ತುವನ್ನು ಪೋಪತ್ವ ಮತ್ತು ಉಪದೇಶಗಳು ಹಾಗೂ ಅಭ್ಯಾಸಗಳೆಂದು ಗುರುತಿಸಿರುವುದು ಆಸಕ್ತಿಕರ ವಿಷಯವಾಗಿದೆ. ಹಾಗಾಗಿ ದಾನಿಯೇಲ 11ನೇ ಅಧ್ಯಾಯವು 7 ಮತ್ತು 8ನೇ ಅಧ್ಯಾಯಗಳ ಪರಸ್ಪರ ಸಂಬಂಧವು ಲೂತರ್ ಮತ್ತು ಇತರ ಪ್ರೊಟೆಸ್ಟಂಟ್ ವ್ಯಾಖ್ಯಾನಕಾರರು ಆಲೋಚನೆಗಳಿಗೆ ಪುಷ್ಟಿ ಒದಗಿಸುತ್ತವೆ. ಪೋಪತ್ವದ ಸಂಸ್ಥೆ ಮತ್ತು ಅದರ ಬೋಧನೆಗಳು ಇತಿಹಾಸದಲ್ಲಿ ಈ ಪ್ರವಾದನೆಗಳು ನೆರವೇರುವುದನ್ನು ನಿರ್ಮಾಣ ಮಾಡುತ್ತವೆಯೆಂದು ಅವರು ಅರಿತುಕೊಂಡರು. ಇದರ ಸಂಬಂಧವಾಗಿ ಎಲೆನ್ ಜಿ ವೈಟಮ್ಮನವರು ಹೀಗೆ ಹೇಳುತ್ತಾರೆ: "ರೋಮನ್ನರ ಅಧಿಕಾರವ್ಯಾಪ್ತಿಯಲ್ಲಿ ಬರುವ ಯಾವ ಸಭೆಯೂ ದೀರ್ಘವಾಗಿ ಮನಸ್ಸಾಕ್ಷಿಯ ಸ್ವಾತಂತ್ರ್ಯವನ್ನು ಅಡೆತಡೆಯಿಲ್ಲದೆ ಅನುಭವಿಸುವಂತೆ ಬಿಡಲ್ಪಡಲಿಲ್ಲ. ಪೋಪುಶಾಹಿಗೆ ಅಧಿಕಾರ ಸಿಗುತ್ತಿದ್ದಂತೆಯೇ ತನ್ನ ಬಾಹುಗಳನ್ನು ಚಾಚಿ ಅದರ ಅಧಿಕಾರವನ್ನು ಒಪ್ಪಿಕೊಳ್ಳದಿರುವವರೆಲ್ಲರನ್ನೂ ಧ್ವಂಸ ಮಾಡಿತು. ಒಂದರ ನಂತರ ಮತ್ತೊಂದು ಸಭೆಗಳು ಅದರ ಆಳ್ವಿಕೆಗೆ ಒಪ್ಪಿಸಿಕೊಟ್ಟವು" – ಮಹಾಹೋರಾಟ, ಪುಟ 62.

## ಚರ್ಚಿಸಬೇಕಾದ ಪ್ರಶ್ನೆಗಳು

1. ಇತರರ ಭಾವನೆಗಳಿಗೆ ನಾವು ಸಂವೇದನೆಯುಳ್ಳವರಾಗಿಯೂ ಸತ್ಯವೇದವು ನಮಗೆ ಅಂತ್ಯದಿನಗಳಲ್ಲಿ ರೋಮ್ ವಹಿಸುವ ಪಾತ್ರದ ಸಂಬಂಧ ಏನನ್ನು ಬೋಧಿಸುತ್ತದೋ ಅದಕ್ಕೆ ರಾಜಿ ಮಾಡಿಕೊಳ್ಳದಿರುವುದು ಹೇಗೆ?

2. ದಾನಿಯೇಲ 11:33ರಲ್ಲಿ "ಜನರಲ್ಲಿನ ಜ್ಞಾನಿಗಳು ಅನೇಕರಿಗೆ ವಿವೇಕ ಹೇಳಲಾಗಿ ಅವರು ಬಹುದಿವಸ ಕತ್ತಿ ಬೆಂಕಿ ಸೆರೆಸೂರೆಗಳಿಗೆ ಸಿಕ್ಕಿ ಬೀಳುತ್ತಿರುವವರು". ಈ ವಾಕ್ಯವು ದೇವರ ನಂಬಿಗಸ್ತಜನರ ಗತಿಯ ಬಗ್ಗೆ ಏನು ಹೇಳುತ್ತದೆ? ಈ ಜನರು ತಾವು ಸಾಯುವ ಮೊದಲು ಏನು

ಮಾಡುತ್ತಿದ್ದರೆಂದು ವಚನವು ಹೇಳುತ್ತದೆ? ಇಂದು ಅದರಲ್ಲಿ ನಮಗೆ ಯಾವ ಸಂದೇಶವಿದೆ?

3. ದಾನಿಯೇಲ 11:36; ರಾಜನು ಮನಸ್ಸು ಬಂದ ಹಾಗೆ ನಡೆದು ತಾನು ಎಲ್ಲಾ ದೇವರುಗಳಿಗಿಂತ ಮಿತಿಮೀರಿ ದೂಷಿಸಿ ನಿಮ್ಮ ಮೇಲಿನ ದೇವೋಗ್ರವು ತೀರುವ ತನಕ ವೃದ್ಧಿಯಾಗಿರುವನು. ಇದು ಯಾರ ಬಗ್ಗೆ ಏನನ್ನು ಹೇಳುತ್ತದೆ? ನೋಡಿರಿ ಯೆಶಾಯ 14:12–17 ಮತ್ತು 2 ಥೆಸ 2:1–4ನ್ನು ಸಹ ನೋಡಿರಿ).

4. ದಾನಿಯೇಲ 11:27, 29 ಮತ್ತು 35 ವಚನಗಳು "ಕ್ಲುಪ್ತ ಕಾಲದಲ್ಲಿ" ಎಂಬ ಪದಗುಚ್ಛವನ್ನು ಉಪಯೋಗಿಸಿವೆ. ಇದು ದೇವರು ಚರಿತ್ರೆಯನು ನಿಯಂತ್ರಣದಲ್ಲಿಟ್ಟುಕೊಂಡಿದ್ದಾನೆಂಬುದರ ಬಗ್ಗೆ ನಮಗೆ ಏನನ್ನು ಹೇಳುತ್ತದೆ?